ಅಧಿಕಾರಿ ಇಂಥ ದುಷ್ಕೃತ್ಯದಲ್ಲಿ ಭಾಗವಹಿಸಿದ್ದಾರೆ, ಅವರ ಬಗ್ಗೆ ಸರಿಯಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತಾ ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಹೇಳಿದ ಹಾಗೆ, ಅವನನ್ನು ಸಸ್ಪೆಂಡ್‌ನಲ್ಲಿಟ್ಟು ಎನ್‌ಕ್ವಯರಿ ಮಾಡಬೇಕು. ಅವನನ್ನು ಸಸ್‌ಪೆಂಡ್ ಮಾಡಿ, ಎನ್‌ಕ್ವಯರಿ ಮಾಡಿ, ಇನ್ನು ಮುಂದೆ ಈ ರಾಜ್ಯದಲ್ಲಿ ಇಂಥದು ರಿಪೀಟ್ ಆಗಕೂಡದು. ಸಾರ್ ನಿಮ್ಮ ಅನುಭವದ ಮುಂದೆ ನಾವು ಯಾರು ಅಲ್ಲ. ತಾವು ಏನೋ ತತ್ಕಾಲಿಕವಾಗಿ ಅರ್ಧ ಉತ್ತರ ಓದಿ ನಾಳೆ ಹೇಳುತ್ತೀರಿ ಎಂದು ಹೇಳಿದಿರಿ ಅದು ಸರಿ ಇದೆ, ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ನಾಳೆ ನಿಮಗೆ ಕನ್‌ವಿನ್ಸ್ ಆದರೆ ದಯಮಾಡಿ ಅವನನ್ನು ಸಸ್‌ಪೆನ್ಸ್‌ನಲ್ಲಿ ಇಡಿ, ದಯಮಾಡಿ ಇನ್ನು ಮುಂದೆ ಈ ರಾಜ್ಯದಲ್ಲಿ ಇದು ರಿಪೀಟ್ ಆಗಬಾರದು, ಆ ಎಸ್‌ಪಿ ಆ ಮಾಲೀಕನ ಕ್ಷಮಾಪಣೆ ಕೇಳಬೇಕು. ಗೌರವಾನ್ವಿತ ನಾಗರಿಕರ ಮೇಲೆ ಈ ರೀತಿಯಾಗಿ ನಡೆದುಕೊಳ್ಳಲಿಕ್ಕೆ ಆಗುವುದಿಲ್ಲ. ಆ ಮಾಲೀಕ ಏನಾದರೂ ಬಹಳ ಸೂಕ್ಷ್ಮ ಇದ್ದರೆ, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರೆ, ಏನಾಗುತ್ತಿತ್ತು ? ಇವತ್ತು ಮಾರ್ಯಾದೆಗಿಂತ ದೊಡ್ಡದು ಯಾವುದು ಇದೆ ? ಸದನದಲ್ಲಿ ನಾವು ಇದನ್ನು ಹೇಗೆ ಸಾರ್ ಟಾಲ್‌ರೇಟ್ ಮಾಡಬೇಕು. ನೋ ಐ ಯಾಂ ಸಾರಿ.

ಶ್ರೀ ಎಂ.ಪಿ. ಪ್ರಕಾಶ್ : ನಾಳೆ ಈ ವಿಚಾರ ಪ್ರಸ್ತಾಪ ಮಾಡುತ್ತೇವೆಂದು ಅವರು ಹೇಳಿದ್ದರು. ನಾನೂ ಕೂಡ ಹಾಗೆ ಭಾವಿಸಿದ್ದೆ. ಈಗ ಈ ವಿಚಾರ ಪ್ರಸ್ತಾಪಿಸಿದೆ.

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರು ನನ್ನ ಛೇಂಬರ್‌ಗೆ ಬಂದು ಕೊಟ್ಟರು. ಈಗ ಎಲ್ಲರಿಗೂ ಅವಕಾಶ ಕೊಡುತ್ತಿದ್ದೆನ್ನೆಲ್ಲ ಅದಕ್ಕೆ ಅವರಿಗೂ ಈಗಲೇ ಅವಕಾಶ ಕೊಟ್ಟುಬಿಟ್ಟೆ. ಇಲ್ಲದಿದ್ದರೆ ನಾಳೇನೆ ಅವರಿಗೆ ಅವಕಾಶ ಕೊಡುತ್ತಿದ್ದೆ.

ಶ್ರೀ ಎಂ.ಪಿ. ಪ್ರಕಾಶ್ : ನಾಳೆ ಎಲ್ಲಾ ವಿವರಗಳನ್ನು ತರಿಸಿಕೊಂಡು ಉತ್ತರ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಗೊರಗುಂಟೆಪಾಳ್ಯದ ರಿಂಗ್ ರೋಡ್ ಜಂಕ್ಷನ್ ಹತ್ತಿರ ಇವತ್ತು ಬೆಳಿಗ್ಗೆ ನಡೆದ ಘಟನೆ

ಬಗ್ಗೆ ಈ ಸಂಜೆ ಪತ್ರಿಕೆಯಲ್ಲಿ ಬಂದಿರತಕ್ಕಂಥ ವಿಷಯದ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಈಗ ನಾನು ಹೇಳಿಕೆ ನೀಡುತ್ತೇನೆ.

ಅಧ್ಯಕ್ಷರು : ಸದನವನ್ನು ನಾಳೇ ಬೆಳಿಗ್ಗೆ 10-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6-23 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ 17-03-2005 ರಂದು ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು)

ದಿನಾಂಕ 16.03.2005 ರಂದು ಬೆಳಿಗ್ಗೆ 8.00 ಗಂಟೆಗೆ ಸಿ.ಎಂ.ಟಿ.ಐ. ಟ್ರಾಫಿಕ್ ಜಂಕ್ಷನ್ ಹತ್ತಿರ ಬಿ.ಎಂ.ಟಿ.ಸಿ. ಬಸ್ ಸಿಗ್ನಲ್ ಜಂಪ್ ನಿಂದ ನಡೆದ ಘಟನೆಯ ವಿವರ

ದಿನಾಂಕ 16.03.2005 ರಂದು ಸುಮಾರು ಬೆಳಿಗ್ಗೆ 8.00 ಗಂಟೆಗೆ ಬಿ.ಎಂ.ಟಿ.ಸಿ. ಬಸ್ ಸಂಖ್ಯೆ ಕೆಎ 01 ಎಫ್ 2948, ಸಿ.ಎಂ.ಟಿ.ಐ. ಟ್ರಾಫಿಕ್ ಜಂಕ್ಷನ್ ಹತ್ತಿರ ಸಿಗ್ನಲ್ ಜಂಪ್ ಮಾಡಿದಾಗ ಅದನ್ನು ನೋಡಿದ ಟ್ರಾಫಿಕ್ ಕಾನ್ಸ್‌ಟೇಬಲ್ ಆ ವಿಷಯದ ಬಗ್ಗೆ ಟ್ರಾಫಿಕ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಶ್ರೀ ಸಿದ್ದಪ್ಪ ಇವರಿಗೆ ಸಂದೇಶ ಕಳುಹಿಸಿದಾಗ, ಅವರು ಆ ಬಸ್ಸನ್ನು ಹಿಂಬಾಲಿಸಿ ಹೋಗಿ ಗೊರಗುಂಟಪಾಳ್ಯದ ಶಿವನ ದೇವಸ್ಥಾನದ ರಿಂಗ್ ರೋಡ್ ಜಂಕ್ಷನ್ ಹತ್ತಿರ ತಡೆದು ನಿಲ್ಲಿಸಿರುತ್ತಾರೆ. ನಂತರ ಆ ಬಸ್ಸನ್ನು ಪಕ್ಕಕ್ಕೆ ಫುಟ್‌ಪಾತ್ ಹತ್ತಿರ ತಂದು ಆ ಚಾಲಕನಿಗೆ ಒಂದು ನೋಟಿಸ್ ನೀಡಿ ಅದರ ಮೇಲೆ ಸಹಿ ಮಾಡುವಂತೆ ಕೋರಿರುತ್ತಾರೆ. ಚಾಲಕ ಸಹಿ ಮಾಡಲು ನಿರಾಕರಿಸಿ ಅವರ ಗುರುತಿಸಿ ಚೀಟಿಯನ್ನು ತೋರಿಸುವಂತೆ ಕೇಳಿ, ಗುರುತಿನ ಚೀಟಿಯನ್ನು ನೋಡಿ ಹಿಂದಿರುಗಿಸಿರುತ್ತಾರೆ. ಅಲ್ಲಿಂದ ಆ ಬಸ್ಸು ಮುಂದೆ ಹೋಗಿರುತ್ತದೆ. ಸ್ವಲ್ಪ ದೂರ ಹೋದ ನಂತರ ಮುಂದಿನ ಕ್ರಾಸ್‌ನಲ್ಲಿ ಆ ಬಸ್ಸಿನ ಚಾಲಕ ಮತ್ತು ಆ ಬಸ್ಸಿನಲ್ಲಿಯೇ ಇದ್ದ ಕೆಲವು ಚಾಲಕರುಗಳು ಆ ಬಸ್ಸನ್ನು ರಸ್ತೆಗೆ ಅಡ್ಡವಾಗಿ ನಿಲ್ಲಿಸಿರುತ್ತಾರೆ. ಇದನ್ನು ಕಂಡ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಅಲ್ಲಿಗೆ ಬಂದು ಏಕೆ ಆ ರೀತಿ ಮಾಡಿದಿರೆಂದು ಪ್ರಶ್ನಿಸಿದಾಗ, ಚಾಲಕರುಗಳು ಸಬ್-ಇನ್ಸ್‌ಪೆಕ್ಟರ್‌ನೊಡನೆ ಜಗಳ ತೆಗೆದು ನೋಟಿಸ್ ಏಕೆ ನೀಡಿದಿರಿ ಎಂದು ಮುಂತಾಗಿ

ಪ್ರಶ್ನಿಸಿರುತ್ತಾರೆ. ಅದನ್ನು ನೋಡಿ ಅನೇಕ ಜನ ಆ ಸ್ಥಳದಲ್ಲಿ ಸೇರಿರುತ್ತಾರೆ ಮತ್ತು ಜಗಳ ಏಕೆ ಆಗುತ್ತಿದೆಯೆಂದು ಪ್ರಶ್ನಿಸಿರುತ್ತಾರೆ. ಆಗ ಅವರಿಗೆ ಬಿ.ಎಂ.ಟಿ.ಸಿ. ಸಿಬ್ಬಂದಿ ಬಸ್ಸನ್ನು ಮುಂದಕ್ಕೆ ತೆಗೆದುಕೊಂಡು ಹೋಗಲು ಪ್ರಯತ್ನಿಸುತ್ತಿರುವುದಾಗಿಯೂ, ಆದರೆ ಸಬ್-ಇನ್ಸ್‌ಪೆಕ್ಟರ್ ಬಿಡುತ್ತಿಲ್ಲವೆಂದೂ ತಪ್ಪಾಗಿ ತಿಳಿಸಿರುತ್ತಾರೆ. ಅಷ್ಟರಲ್ಲಿ ಹೊಯ್ಸಳ ವಾಹನ ಒಂದು ಅಲ್ಲಿಗೆ ಬಂದಿರುತ್ತದೆ. ಹೊಯ್ಸಳದವರಿಗೂ ಸಹ ಬಿ.ಎಂ.ಟಿ.ಸಿ. ಸಿಬ್ಬಂದಿಗಳು, ಪೊಲೀಸರು ಚಾಲಕನ ಗುರುತಿನ ಚೀಟಿಯನ್ನು ತೆಗೆದುಕೊಂಡು ತೊಂದರೆ ನೀಡುತ್ತಿದ್ದಾರೆ ಎಂದು ತಪ್ಪಾಗಿ ತಿಳಿಸಿರುತ್ತಾರೆ. ಅಷ್ಟರಲ್ಲಿ ಅನೇಕ ಬಿ.ಎಂ.ಟಿ.ಸಿ. ಬಸ್ಸುಗಳ ಚಾಲಕರುಗಳು ಸಹ ತಮ್ಮ ಬಸ್ಸುಗಳನ್ನು ನಿಲ್ಲಿಸಿ ಅಲ್ಲಿದ್ದ ಚಾಲಕರೊಡನೆ ಸೇರಿಕೊಂಡು ಸಬ್-ಇನ್ಸ್‌ಪೆಕ್ಟರ್ ಮೇಲೆ ಹಲ್ಲೆ ಮಾಡಲು ಪ್ರಾರಂಭಿಸಿ ಅಲ್ಲಿದ್ದ ಹೊಯ್ಸಳದವರು ಅವರಿಗೆ ರಕ್ಷಣೆ ನೀಡಿದಾಗ, ಹೊಯ್ಸಳ ವಾಹನವನ್ನು ಸುಟ್ಟು ಸಬ್-ಇನ್ಸ್‌ಪೆಕ್ಟರನ್ನು ಅಟ್ಟಿಸಿಕೊಂಡು ಹೋಗಿರುತ್ತಾರೆ. ಆಗ ಸಬ್-ಇನ್ಸ್‌ಪೆಕ್ಟರ್ ಗೋಕುಲ್‌ದಾಸ್ ಎಕ್ಸ್‌ಪೋರ್ಟ್ ಸಂಸ್ಥೆಯಲ್ಲಿ ಆಶ್ರಯ ಪಡೆದಿದ್ದು ಓಡಿಸಿಕೊಂಡು ಬಂದವರು ಕಲ್ಲಿನಿಂದ ಆ ಸಂಸ್ಥೆಯ ಕಾರು ಮತ್ತು ಗಾಜುಗಳನ್ನು ಒಡೆದಿರುತ್ತಾರೆ. ಅಷ್ಟರಲ್ಲಿ ಇತರೆ ಪೊಲೀಸ್ ಸಿಬ್ಬಂದಿಗಳು ಅಲ್ಲಿಗೆ ಧಾವಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದಿರುತ್ತಾರೆ. ಆ ಮಧ್ಯೆ ಕೆಲ ಕಿಡಿಗೇಡಿಗಳು ಪೊಲೀಸ್ ವಾಹನಗಳ ಮೇಲೆ ಮತ್ತು ಬಿ.ಎಂ.ಟಿ.ಸಿ. ಬಸ್ಸುಗಳ ಮೇಲೆ ಕಲ್ಲು ತೂರಿರುತ್ತಾರೆ. ಕಲ್ಲು ತೂರಾಟದಲ್ಲಿ 2-3 ಬಿ.ಎಂ.ಟಿ.ಸಿ. ವಾಹನ ಮತ್ತು 5 ಪೊಲೀಸ್ ವಾಹನಗಳ ಗಾಜುಗಳು ಒಡೆದಿರುತ್ತದೆ. 7-8 ಪೊಲೀಸ್ ಸಿಬ್ಬಂದಿಗೆ ಸಣ್ಣ-ಪುಟ್ಟ ಗಾಯಗಳಾಗಿರುತ್ತದೆ. ಸ್ಥಳಕ್ಕೆ ಧಾವಿಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಸ್ಥಳದಲ್ಲಿ ಹೆಚ್ಚು ಅನಾಹುತಗಳಾಗದಂತೆ ಕೂಡಲೆ ಕ್ರಮ ಕೈಗೊಂಡು ಅಲ್ಲಿ ಸೇರಿದ್ದ ಜನರನ್ನು ಚದುರಿಸಿ, ರಸ್ತೆಯಲ್ಲಿ ನಿಂತಿದ್ದ ವಾಹನಗಳನ್ನು ಪುನಃ ಮುಂದೆ ಹೋಗುವಂತೆ ಅವಕಾಶ ಮಾಡಿಕೊಟ್ಟಿರುತ್ತಾರೆ. ಈ ಘಟನೆಯಲ್ಲಿ ಜನರನ್ನು ಚದರಿಸಲು ಟಿಯರ್ ಸ್ಮೋಕ್ ಶೆಲ್‌ಗಳನ್ನು ಬಳಸಲಾಗಿದೆ. ಹಾಗೂ 10 ಗಂಟೆ ಸುಮಾರಿಗೆ ಇಡೀ ಪ್ರದೇಶದಲ್ಲಿ ಯಾವುದೇ ತೊಂದರೆ ಇಲ್ಲದೆ ಶಾಂತಿ ಪ್ರಾಪ್ತವಾಗಿದೆ. ಈ ಸಂಬಂಧದಲ್ಲಿ ಸಂಬಂಧ ಪಟ್ಟವರ ಮೇಲೆ ಕೇಸು ದಾಖಲು ಮಾಡಿ ಕ್ರಮ ಕೈಗೊಳ್ಳಲಾಗುತ್ತಿದೆ.